

# ಕ್ಲಿಪ್ಪು...

ಸುಸ್ತಾಗಿ ಮಲಗಿದ್ದ ನನ್ನ ಎದೆಯ ಮೇಲೆ
ಚಿಟ್ಟೆಯೊಂದು ಕುಳಿತು ಮಕರಂದವ
ಹೀರಿದ್ದು ನನಗೆ ಗೊತ್ತಾಗಲೇ ಇಲ್ಲ

ಅರೆಗಣ್ಣಲ್ಲಿ ನೋಡಿದ ಅದರ
ಕಪ್ಪು ಬಣ್ಣದ ರೆಕ್ಕೆ ಅಲ್ಲಲ್ಲಿ ನೀಲ
ಚಿತ್ತಾರದ ಕಣ್ಣು
ನಾನು ಅವಳಿಗೆಂದು ಯಾವುದೋ
ಜಾತ್ರೆಯಲ್ಲಿ ಕದ್ದು ತಂದ ಕ್ಲಿಪ್ಪಿನಂತಿತ್ತು

ಅದು ಏಕೆ ನನ್ನೆದೆಯ
ಮಕರಂದವ ಹೀರಿತು!
ಒಂದು ಮಾತು ಕೇಳಬಾರದೆ
ಹಾರಿಹೋಗುವಾಗ ಒಂದು
ಮಾತು ಹೇಳಬಾರದೆ

ಮತ್ತೆ ಮೈ ತುಂಬಾ ಹೂ
ಅರಳಿಸಿ ನಿಂತಿರುವೆ!
ಅರೆ ನಿದ್ದೆಯಲಿ ಅದು
ಮತ್ತೆ ಬಂದಾಗ ಕಣ್ಣ ತುಂಬಿಕೊಳಲು
ಆದರೂ ಅದು ಬಂದು ಮಕರಂದವ
ಹೀರಿದ್ದು ತಿಳಿಯಲೇ ಇಲ್ಲ
ಈ ಗಾಡ ಮೌನದಲ್ಲೂ...

ಕದ್ದ ಕ್ಲಿಪ್ಪನ್ನು ವಾಪಸು ಮಾಡಲು
ಹೊರಟಿರುವೆ
ಆ ಜಾತ್ರೆಗೆ ತನ್ನ ಸಣಕಲು
ಹೆಂಡತಿಯ ಜೊತೆ ನಿಂತಿದ್ದ ಅಂಗಡಿಯ
ಮಾಲೀಕನ ಹುಡುಕಲು

ಅದೇ ಆ... ಕಪ್ಪು ಬಣ್ಣದ ನೀಲ
ಕಣ್ಣುಗಳ ಕ್ಲಿಪ್ಪು...
ಇರಬಹುದು ಅದೇ ಹಳೆಯ ಗುಂಗಲ್ಲಿ
ಅದೇ ಹಳೆಯದನ್ನ
ಕನವರಿಸುತ್ತ ಒಂದಷ್ಟು
ರೊಟ್ಟಿ ಕುಡಿಕೆ ಮೊಸರು ಹಿಡಿದು
ಊರ ಮುಂದೆ ಕುಳಿತಿರುವ
ನನ್ನ ಅಜ್ಜನ ನೋಡಿ ಒಬ್ಬ ಅದೇನೋ
ಬರೆದುಕೊಂಡು ಹೋದನಂತೆ
ಆ... ಮುಪ್ಪಿನ ಷಡಕ್ಷರಿ ಇರಬಹುದು

ಮೇಲಿನ ಸಾಲುಗಳು ಮತ್ತೆ
ಮುಂದುವರೆಯುವುವು...
ಅಲ್ಲಿ ನಮ್ಮ ಅಪ್ಪನ ಸೇರಿಸಿಕೊಳ್ಳಿ

ಮತ್ತದೇ ಮೇಲಿನ ಸಾಲುಗಳು
ಆ ಅಪ್ಪನ ಜಾಗದಲ್ಲಿ ನನ್ನ ಸೇರಿಸಿಕೊಳ್ಳಿ
ಅದೇ ಮುರುಕು ಧರ್ಮ ಶಾಲೆ
ಒಂದಷ್ಟು?
ರೊಟ್ಟಿ
ಪ್ಯಾಕೆಟ್ಟಿನ ಮೊಸರು
ಮೊಬೈಲೂ

● ಸೋಮಶೇಖರ ಸಿರಾ